# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1258 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕೆ.ವಿವೇಕಾನಂದ |
| ಉತ್ತರಿಸಬೇಕಾದ ದಿನಾಂಕ | : | 22.08.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕ್ರೈಸ್ ಸಂಸ್ಥೆ ವತಿಯಿಂದ ನಡೆಯುತ್ತಿರುವ ವಿವಿಧ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಇದರಲ್ಲಿ ಸ್ವಂತ ಕಟ್ಟಡಗಳಲ್ಲಿ ಎಷ್ಟು ಶಾಲೆಗಳು ನಡೆಯುತ್ತಿವೆ ಮತ್ತು ಖಾಸಗಿ ಬಾಡಿಗೆ ಕಟ್ಟಡಗಳಲ್ಲಿ ಎಷ್ಟು ವಸತಿ ಶಾಲೆಗಳು ನಡೆಯುತ್ತಿವೆ; (ತಾಲೂಕುವಾರು ವಿವರವಾದ ಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 848 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 656 ವಸತಿ ಶಾಲೆ/ಕಾಲೇಜುಗಳು ಸ್ವಂತ ಕಟ್ಟಡದಲ್ಲಿ 144 ವಸತಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ, 48 ವಸತಿ ಶಾಲೆಗಳು ಸರ್ಕಾರಿ ಕಟ್ಟಡಗಳ ಬಾಡಿಗೆ ರಹಿತ /ಸಂಯೋಜಿತವಾಗಿ ಕಾರ್ಯನಿರ್ವಹಿಸುತ್ತಿವೆ.<br>ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡಗಳ ವಿವರ ಮತ್ತು ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳ ದಾಖಲಾತಿ ವಿವರಗಳನ್ನು ಅನುಬಂಧ-01, 02, ಮತ್ತು 03 ರಲ್ಲಿ ನೀಡಲಾಗಿದೆ. |
| ಆ) | ವಸತಿ ಶಾಲೆಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿದ್ದು, ವಿದ್ಯಾರ್ಥಿಗಳಿಗೆ ಅವಶ್ಯಕ ವಿರುವ ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದ ಸರ್ಕಾರ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಯಾವ ಕ್ರಮವನ್ನು ಕೈಗೊಂಡಿದೆ; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳ ವಿವರ ಈ ಕೆಳಕಂಡಂತಿದೆ.<br>• ಕ್ರೈಸ್ ನ 848 ವಸತಿ ಶಾಲೆ/ಕಾಲೇಜುಗಳ ಪೈಕಿ 656 (ಪ.ಜಾತಿ-402, ಪ.ವರ್ಗ-113 ಮತ್ತು ಹಿಂ.ವರ್ಗ-141) ಸ್ವಂತ ಕಟ್ಟಡಗಳಿದ್ದು, ಉಳಿದ 192 ಬಾಡಿಗೆ, ಬಾಡಿಗೆ ರಹಿತ ಮತ್ತು ಸಂಯೋಜಿತವಾಗಿ ಕಾರ್ಯನಿರ್ವಹಿಸುತ್ತಿರು ತ್ತವೆ.<br>• ಕ್ರೈಸ್ ನ ವತಿಯಿಂದ 53 ಕಾಮಗಾರಿಗಳು ನಿರ್ಮಾಣ ಹಂತದಲ್ಲಿರುತ್ತವೆ.<br>• 58 ವಸತಿ ಶಾಲೆಗಳ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ.<br>• ಕೆ.ಕೆ.ಆರ್.ಡಿ.ಬಿ. ವತಿಯಿಂದ ಅನುಮೋದನೆ ಯಾಗಿರುವ 13 ವಸತಿ ಶಾಲೆಗಳ ಪೈಕಿ 01 ವಸತಿ ಶಾಲೆಯ ಕಾಮಗಾರಿಗೆ ಮರು ಟೆಂಡರ್ ಕರೆಯಲಾಗಿರುತ್ತದೆ ಹಾಗೂ ಉಳಿದ 12 ವಸತಿ ಶಾಲಾ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು,ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುತ್ತದೆ |

| | | |
|---|---|---|
| | | • ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 09 ವಸತಿ ಶಾಲೆಗಳು ಅನುಮೋದನೆಯಾಗಿದ್ದು, ಕರ್ನಾಟಕ ಗೃಹ ಮಂಡಳಿ ವತಿಯಿಂದ ವಸತಿ ಶಾಲಾ ಕಟ್ಟಡಗಳನ್ನು ನಿರ್ಮಿಸಲು ಆದೇಶಿಸಲಾಗಿರುತ್ತದೆ.<br>• ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ವಹಿಸಲಾದ 09 ವಸತಿ ಶಾಲೆಗಳು ಮತ್ತು ಪರಿಶಿಷ್ಟ ಜಾತಿಯ 12 ವಸತಿ ಶಾಲೆಗಳು, ಪರಿಶಿಷ್ಟ ವರ್ಗದ 08 ವಸತಿ ಶಾಲೆಗಳು ಸೇರಿದಂತೆ 20 ವಸತಿ ಶಾಲೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.<br>• ವಸತಿ ಶಾಲೆಗಳಿಲ್ಲದ ಹೋಬಳಿಗಳಲ್ಲಿ ಹೋಬಳಿಗೊಂದು ವಸತಿ ಶಾಲೆಯನ್ನು ಪ್ರಾರಂಭಿಸಲು ಆದೇಶಾನುಸಾರ 22 ವಸತಿ ಶಾಲೆಗಳು ಸೇರಿ ಪ್ರಸ್ತುತ 13 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿರುತ್ತದೆ ಅನುದಾನ ಲಭ್ಯತೆಯ ಅನುಸಾರ ಆದ್ಯತೆಯ ಮೇರೆಗೆ ಹಂತ ಹಂತವಾಗಿ ಪ್ರಾರಂಭಿಸಲು ಕ್ರಮವಹಿಸಲಾಗುವುದು.<br>• ಒಟ್ಟಾರೆ 26 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿರುವುದಿಲ್ಲ. ಸದರಿ ಶಾಲೆಗಳಿಗೆ ನಿವೇಶನಗಳನ್ನು ಮಂಜೂರು ಮಾಡುವಂತೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿರುತ್ತದೆ.<br>ವಸತಿ ಶಾಲೆ/ಕಾಲೇಜುಗಳ ಕಟ್ಟಡ ಕಾಮಗಾರಿ ಪ್ರಗತಿಯ ವಿವರವನ್ನು ಅನುಬಂಧ-04 ರಲ್ಲಿ ನೀಡಲಾಗಿದೆ. |
| ಇ) | **ವಸತಿ ಶಾಲೆಗಳನ್ನು ಖಾಸಗಿ ಕಟ್ಟಡದಲ್ಲಿ ನಡೆಸಲು ಸರ್ಕಾರದ ವತಿಯಿಂದ ಮಕ್ಕಳಿಗೆ ಬೇಕಾಗುವ ಮೂಲಭೂತ ಸೌಕರ್ಯ ಕುರಿತು ಯಾವುದಾದರೂ ನಿಯಮಾವಳಿಯನ್ನು ರೂಪಿಸಲಾಗಿದೆಯೇ; (ರೂಪಿಸಿದ್ದರೆ ಪೂರ್ಣ ಮಾಹಿತಿ ನೀಡುವುದು)** | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಲ್ಲಿ ಖಾಸಗಿ ಕಟ್ಟಡದಲ್ಲಿ ನಡೆಸಲಾಗುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಯಾವುದೇ ನಿಯಮಾವಳಿಗಳನ್ನು ರೂಪಿಸಿರುವುದಿಲ್ಲ.<br>ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡದಲ್ಲಿರುವ ಎಲ್ಲಾ ವಸತಿ ಶಾಲೆ/ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ ವಸತಿ ಶಾಲೆ/ಕಾಲೇಜುಗಳಿಗೆ ಬೇಡಿಕೆಯಿರುವ 13 ಬಗೆಯ ಮೂಲಭೂತ ಸಾಮಗ್ರಿಗಳನ್ನು (ಡೆಸ್ಕ್ ಕಮ್ ಬೆಂಚ್ 5 ಸೀಟರ್, ಟು ಟೈರ್ ಕಾಟ್, ಹಾಸಿಗೆಗಳು, ದಿಂಬುಗಳು, ಬೆಡ್‌ಶೀಟ್, ಬೆಡ್‌ಸ್ಪ್ರೆಡ್, ತಟ್ಟೆ-ಲೋಟಗಳು, ಪಾತ್ರೆ ಪರಿಕರಗಳು (ಸೆಟ್‌ಗಳಲ್ಲಿ), ವಾಟರ್ ಪ್ಯೂರಿಫೈಯರ್, ಪಾಠೋಪಕರಣಗಳು, ನರ್ಸಿಂಗ್ ಕಿಟ್, ಗ್ರೈಂಡರ್, |

| | | |
|---|---|---|
| | | ಪ್ರಯೋಗಾಲಯ ಸಾಮಗ್ರಿಗಳು (ಸೆಟ್ ಗಳಲ್ಲಿ ಪ್ರೊಜೆಕ್ಟರ್ ಮತ್ತು ಸ್ಕ್ರೀನ್) ಒಂದೇ ಬಾರಿ ಒ ಅನುಮೋದನೆ ನೀಡಲಾಗಿದೆ. ಅದರಂತೆ, ಟೆಂಡರ್ ಪ್ರಕ್ರಿಯೆಯ ಹಂತದಲ್ಲಿರುತ್ತದೆ.<br>ಎಲ್ಲಾ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಸೊಳ್ಳೆ ಪರದೆಗಳನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ.ಅದರಂತೆ, L1 ಬಿಡ್ ದಾರರಾದ ಕೇಂದ್ರೀಯ ಬಂಡಾರ ಸಂಸ್ಥೆಗೆ ಸರಬರಾಜು ಆದೇಶ ನೀಡಲಾಗಿದೆ.<br>ಬೆಳಗಾವಿ, ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗಗಳ ಎಲ್ಲಾ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಟ್ರಂಕ್ ಗಳನ್ನು ಸರಬರಾಜು ಮಾಡಲಾಗಿರುತ್ತದೆ ಹಾಗೂ ಕಲಬುರಗಿ ಕಂದಾಯ ವಿಭಾಗಕ್ಕೆ ಟ್ರಂಕ್ ಗಳನ್ನು ಸರಬರಾಜು ಮಾಡಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>ಬಾಡಿಗೆ ಕಟ್ಟಡದಲ್ಲಿರುವ ಎಲ್ಲಾ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮ ವಹಿಸಲಾಗುತ್ತಿದೆ. |

ಸಕಇ 195 ಎಂಡಿಎಸ್ 2025

(ಡಾ.ಹೆಚ್.ಸಿ ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು.